# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2195(2547)
ಸದಸ್ಯರ ಹೆಸರು : ಶ್ರೀ ಪ್ರಕಾಶ್ ಕೆ.ರಾಥೋಡ್ (ನಾಮನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದವರು : ಮಾನ್ಯ ಮುಖ್ಯಮಂತ್ರಿಗಳು
ಉತ್ತರಿಸಬೇಕಾದ ದಿನಾಂಕ : 24.03.2022

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ವತಿಯಿಂದ ಸಚಿವ ಸ್ಥಾನಮಾನ ಹೊಂದಿರುವವರಿಗೆ ಸರ್ಕಾರಿ ವಸತಿ ಗೃಹಗಳನ್ನು ಎಲ್ಲೆಲ್ಲಿ ಮಂಜೂರು ಮಾಡಲಾಗಿದೆ; ಇವುಗಳಲ್ಲಿ ವಾಸವಿರುವ / ಖಾಲಿ ಇರುವ ವಸತಿ ಗೃಹಗಳೆಷ್ಟು; (ವಿವರ ಒದಗಿಸುವುದು) | ಸಚಿವ ಸ್ಥಾನಮಾನ ಹೊಂದಿರುವ ಇಬ್ಬರು ಗಣ್ಯರಿಗೆ ವಸತಿ ಗೃಹಗಳನ್ನು ಮಂಜೂರು ಮಾಡಲಾಗಿದ್ದು, ವಿವರ ಈ ಕೆಳಕಂಡಂತಿದೆ.<br>1. ಶ್ರೀ ಎಂ.ಪಿ ರೇಣುಕಾಚಾರ್ಯ ಇವರಿಗೆ ನಂ.7, ಸಪ್ತಸಚಿವರ ನಿವಾಸ, ಸ್ಯಾಂಕಿ ರಸ್ತೆ, ಬೆಂಗಳೂರು.<br>2. ಶ್ರೀ ಎಸ್.ಆರ್ ವಿಶ್ವನಾಥ್ ಇವರಿಗೆ ನಂ.1, ಸಪ್ತಸಚಿವರ ನಿವಾಸ, ಸ್ಯಾಂಕಿ ರಸ್ತೆ, ಬೆಂಗಳೂರು. |
| ಆ | ಸಚಿವ ಸ್ಥಾನಮಾನ ಹೊಂದಿರುವಂತಹ ಇತರರು ಎಷ್ಟು ಜನ ತಮ್ಮ ಸ್ವಂತ / ಬಾಡಿಗೆ ಮನೆಗಳಲ್ಲಿ ವಾಸವಾಗಿದ್ದಾರೆ; (ವಿವರ ಒದಗಿಸುವುದು) | ಮೇಲ್ಕಂಡ ಇಬ್ಬರನ್ನು ಹೊರತುಪಡಿಸಿ, ಇನ್ನುಳಿದ ಸಚಿವ ಸ್ಥಾನಮಾನ ಹೊಂದಿರುವಂತಹ ಗಣ್ಯರು ತಮ್ಮ ಸ್ವಂತ / ಬಾಡಿಗೆ ಮನೆಗಳಲ್ಲಿ ವಾಸವಾಗಿರುತ್ತಾರೆ. |
| ಇ. | ಎಷ್ಟು ಸರ್ಕಾರಿ ವಸತಿ ಗೃಹಗಳನ್ನು ರಾಜ್ಯದ ಉಚ್ಚನ್ಯಾಯಾಲಯದ ನ್ಯಾಯಾಧೀಶರಿಗೆ ನೀಡಲಾಗಿದೆ; ಇದರಲ್ಲಿ ವಾಸವಿರುವ / ಖಾಲಿ ಇರುವ ವಸತಿ ಗೃಹಗಳೇಷ್ಟು; (ವಿವರ ಒದಗಿಸುವುದು). | ರಾಜ್ಯದ ಉಚ್ಚನ್ಯಾಯಾಲಯದ ನ್ಯಾಯಾಧೀಶರಿಗೆ ಆರು ವಸತಿ ಗೃಹಗಳನ್ನು ನೀಡಲಾಗಿದೆ. ಈ ಪೈಕಿ ಐದು ವಸತಿ ಗೃಹಗಳು ಖಾಲಿ ಇದ್ದು, ಒಂದು ವಸತಿ ಗೃಹದಲ್ಲಿ ಈ ಕೆಳಕಂಡ ನ್ಯಾಯಧೀಶರು ವಾಸವಿರುತ್ತಾರೆ.<br>ನ್ಯಾಯಮೂರ್ತಿ, ಶ್ರೀ ಅಲೋಕ್ ಆರಾಧೆ, ಕರ್ನಾಟಕ ಉಚ್ಚನ್ಯಾಯಾಲಯ, ವಸತಿ ಗೃಹ ನಂ.2, ಸಪ್ತಸಚಿವರ ನಿವಾಸ, ಸ್ಯಾಂಕಿ ರಸ್ತೆ, ಬೆಂಗಳೂರು. |

ಸಿಆಸುಇ 20 ಶಿಸನೇ 2022.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ